## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

## ಸಿಸಿ ನಂ. **62/2020**

ಚಾಸಾ-6 ಫ್ರಾಸಾ-6

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 04-07-2025

| | | |
|---|---|---|
| ಹೆಸರು | : | ಮಹೇಶ |
| ತಂದೆಯ ಹೆಸರು | : | ಮಹಾಂತು |
| ವಯಸ್ಸು | : | 25 ವರ್ಷ |
| ಉದ್ಯೋಗ | : | ಚಾಲಕ |
| ವಾಸಸ್ಥಳ | : | ಅಫಜಲಪೂರ |

-: ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-

ಚಾಸಾ 1, 4, 5 ರವರ ಪರಿಚಯ ಇರುತ್ತದೆ.

ಅಫಜಲಪೂರದ ಸಂಗೊಳ್ಳಿ ರಾಯಣ್ಣ ವೃತ್ತದ ಬಳಿ ಇರುವ ಸಂಗೊಳ್ಳಿ ರಾಯಣ್ಣ ರವರ ಭಾವಚಿತ್ರಕ್ಕೆ ನ್ಯಾಯಾಲಯದ ಮುಂದೆ ಇರುವ ಆರೋಪಿಯೂ ಸಂಗೊಳ್ಳಿ ರಾಯಣ್ಣ ರವರಿಗೆ ಅವಮಾನ ಮಾಡುವ ಉದ್ದೇಶದಿಂದ ಭಾವಚಿತ್ರಕ್ಕೆ ಚಪ್ಪಲಿ ಮತ್ತು ಶಾಲಾ ಮಕ್ಕಳ ಬೂಟುಗಳನ್ನು ಹಾಕಿರುತ್ತಾನೆ. ನಾವು ಸದರಿ ವಿಷಯವನು ಖಂಡಿಸಿ ಹೋರಾಟ ಮಾಡಿ ಪೋಲಿಸರಿಗೆ ದೂರು ನೀಡಿರುತ್ತೇವೆ.

ಸಾಕ್ಷಿಗೆ ಎರಡು ಚಪ್ಪಲಿಗಳು ಮತ್ತು ಎರಡು ಶಾಲಾ ಮಕ್ಕಳ ಧರಿಸುವ ಎರಡು ಬೂಟುಗಳನ್ನು ತೋರಿಸಿದ್ದು ಸಾಕ್ಷಿಯೂ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ. 1 ರಿಂದ 4 ಎಂದು ಗುರುತಿಸಲಾಗಿದೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ **SJG** ವಕೀಲರಿಂದಃ-

ಈ ಘಟನೆ ನಡೆದ ಸಮಯದಲ್ಲಿ ನನ್ನ ಬಳಿ ನನ್ನ ಸ್ವಂತ ವಾಹನ ಇತ್ತು ಎಂದರೆ ಸರಿ. ಸದರಿ ವಾಹನದ ಮಾಲೀಕನು ಮತ್ತು ಚಾಲಕ ನಾನೇ ಆಗಿದ್ದೆ ಎಂದರೆ ಸರಿ. ನಾನು ಘಟನೆ ಕುರಿತು

ಯಾವುದೇ ಹೋರಾಟ ಮಾಡಿಲ್ಲ ಮತ್ತು ನನ್ನ ವಾಹನವನ್ನು ತೆಗೆದುಕೊಂಡು ವಿಜಯಪುರಕ್ಕೆ ಹೋಗಿದೆ ಎಂದರೆ ಸರಿಯಲ್ಲ. ಘಟನೆ ಆದ ನಿಖರವಾದ ದಿನಾಂಕವನ್ನು ನನಗೆ ಈಗ ಹೇಳಲು ಬರುವುದಿಲ್ಲ.

ಆರೋಪಿ ಮತ್ತು ನನ್ನ ಮನೆ ಅಕ್ಕಪಕ್ಕದಲ್ಲಿದೆ ಎಂದರೆ ಸರಿ. ಆರೋಪಿತನಿಗೆ ಮತ್ತು ನಮಗೆ ಚರಂಡಿ ನೀರಿನ ಸಲುವಾಗಿ ಜಗಳ ಇದೆ ಎಂದರೆ ಸರಿಯಲ್ಲ. ಆರೋಪಿತನ ಮೇಲೆ ಇರುವ ದ್ವೇಷಕ್ಕಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ. 1 ರಿಂದ 4 ಎಲ್ಲಾ ಚಪ್ಪಲಿ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸಾಕ್ಷಿಯೂ ಇವುಗಳನ್ನು ಆ ದಿನ ಭಾವಚಿತ್ರಕ್ಕೆ ಹಾಕಲಾಗಿತ್ತು ಎಂದು ನುಡಿಯುತ್ತಾರೆ. ಆರೋಪಿ ಮೇಲೆ ಇರುವ ಹಳೆ ದ್ವೇಷದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ